ಈ) ಇ-ಸ್ಟ್ಯಾಂಪಿಂಗ್ ವ್ಯವಸ್ಥೆಯನ್ನು ಈಗ ರಾಜ್ಯಾಂದ್ಯಂತ ಜಾರಿಗೆ ತಂದಿದ್ದು, ಸುಮಾರು 248 ಕಡೆ ಪೋಸ್ಟ್ ಆಫೀಸ್, ಬ್ಯಾಂಕ್‌ಗಳು, ಕರ್ನಾಟಕ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಮುಖಾಂತರ ಇ-ಸ್ಟ್ಯಾಂಪಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ. ಸದ್ಯದಲ್ಲೇ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗುತ್ತಿದೆ. ದಸ್ತಾವೇಜು ಹಾಳೆ ಪಡೆಯಲು ಮೇಲ್ಕಂಡಂತೆ ವ್ಯವಸ್ಥೆ ಮಾಡಿರುವುದರಿಂದ ಬಾಂಡ್ ಪೇಪರ್‌ಗಳು ಮೂಲ ಬೆಲೆಯಲ್ಲಿ ಸಿಗುತ್ತಿರುವುದರಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗುತ್ತಿರುವುದಿಲ್ಲ.

ಕರಕುಶಲ ಕರ್ಮಿಗಳ ಅಭಿವೃದ್ಧಿ

295 (528) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ):-(ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) 2008-09ನೇ ಸಾಲಿನಲ್ಲಿ ಕರಕುಶಲ ಕರ್ಮಿಗಳ ಅಭಿವೃದ್ಧಿಗೆ ಬಿಡುಗಡೆ ಮಾಡಲಾದ ಹಣವೆಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಹಣವನ್ನು ಹೊಯ್ಸಳ ಕೋ-ಆಪರೇಟಿವ್ ಬ್ಯಾಂಕ್, ಚಳ್ಳಕೆರೆ ಎಂಬ ಖಾಸಗಿ ಬ್ಯಾಂಕಿಗೆ ಸರ್ಕಾರಿ ಹಣವನ್ನು ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ? ಬಂದಿದ್ದಲ್ಲಿ ಕಾರಣವೇನೆ?

ಇ) ಸದರಿ ಅನುದಾನದಲ್ಲಿ ಎಷ್ಟು ಫಲಾನುಭವಿಗಳಿಗೆ ಹಣ ನೀಡಲಾಗಿದೆ ಹಾಗೂ ಎಷ್ಟು ಬಾಕಿ ಉಳಿದಿದೆ (ವಿವರ ನೀಡುವುದು)?

ಶ್ರೀ ವೆಂಕಟರಮಣಪ್ಪ (ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು):-

ಅ) 2008-09ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಕರಕುಶಲ ಕರ್ಮಿಗಳ ಅಭಿವೃದ್ಧಿಗೆ ಕೆ.ಎಸ್.ಹೆಚ್.ಡಿ.ಸಿ.ಗೆ ರಾಜ್ಯ ಸರ್ಕಾರದಿಂದ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

1. ರೂ. 17.50 ಲಕ್ಷಗಳನ್ನು ಬೀದರ್‌ನ ಬಿದ್ರಿ ಕರಕುಶಲ ಕರ್ಮಿಗಳಿಗೆ ಕಚ್ಚಾ ವಸ್ತು ಬಿಡುಗಡೆ ಮಾಡ

2. ರೂ. 7.5 ಲಕ್ಷಗಳನ್ನು ಮೈಸೂರು, ಶಿವಮೊಗ್ಗ, ಕಾರವಾರ, ಬೀದರ್, ಕೊಪ್ಪಳ, ಗದಗ, ರಾಮನಗರ, ಧಾರವಾಡ ಜಿಲ್ಲೆಯ ಒಟ್ಟು 10 ಮಂದಿಗೆ ರಾಜ್ಯ ಪ್ರಶಸ್ತಿ ಹಾಗೂ ಮೂರು ಮಂದಿಗೆ ಪ್ರಶಂಸನಾ ಪತ್ರ ನೀಡಲು ಖರ್ಚು ಮಾಡಲಾಗಿದೆ.

3. ಕಿನ್ನಾಳ, ನವಲಗುಂದ, ಬಳ್ಳಾರಿ, ಬಿಜಾಪುರ, ಬೀದರ್, ಬೆಂಗಳೂರುಗಳಲ್ಲಿ ತಯಾರಿಸಿದ ವಿಶಿಷ್ಟ ಕಲೆಯ ಅಲ್ಪ ಪರಿಚಿತ ಕರಕುಶಲ ವಸ್ತುಗಳ ಮೇಲೆ ರಿಯಾಯಿತಿ

ನೀಡಲು ರೂ. 5.00 ಲಕ್ಷ ವೆಚ್ಚ ಮಾಡಲಾಗಿದೆ.

ಆ) ಇಲ್ಲ

ಇ) ರೂ. 30.00 ಲಕ್ಷಗಳನ್ನು ಕಚ್ಚಾ ವಸ್ತು ವಿತರಣೆ, ಕುಶಲಕಲಾ ರಾಜ್ಯ ಪ್ರಶಸ್ತಿ ಹಾಗೂ ಪ್ರಶಂಸನಾ ಪತ್ರಗಳ ವಿತರಣೆಗೆ ಹಾಗೂ ಕೆಳಕಂಡ ಅಲ್ಪ ಪರಿಚಿತ ಕಲಾವಸ್ತುಗಳ ಉತ್ಪನ್ನಗಳ ಮಾರಾಟದಲ್ಲಿ ರಿಯಾಯಿತಿ ನೀಡಲು ಪೂರ್ಣವಾಗಿ ಉಪಯೋಗಿಸಲಾಗಿದೆ.

1.	ಕಿನ್ನಾಳ ಕಲೆ	– 208 ಕುಶಲಕರ್ಮಿಗಳು
2.	ನವಲಗುಂದ ಕಾರ್ಪೆಟ್	– 42 ಕುಶಲಕರ್ಮಿಗಳು
3.	ಕನ್ನಡಿ ಮತ್ತು ಕಸೂತಿ ಕಲೆ	– 150 ಕುಶಲಕರ್ಮಿಗಳು
4.	ಕಂಚಿನ ಕಲೆ	– 56 ಕುಶಲಕರ್ಮಿಗಳು
5.	ಬಿದ್ರಿ ಕಲೆ	– 250 ಕುಶಲಕರ್ಮಿಗಳು

ಅನುದಾನದ ಬಾಕಿ ಉಳಿದಿರುವುದಿಲ್ಲ.

ಭೂಮಾಪನ ಇಲಾಖೆಯ ಶುಲ್ಕ

298 (282) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :– (ಮಾನ್ಯ ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ 20 ವರ್ಷಗಳಿಂದ ಜಾರಿಯಲ್ಲಿದ್ದ ಎಫ್.ಎಂ.ಬಿ. ಶುಲ್ಕವನ್ನು 6 ರೂಪಾಯಿಗಳಿಂದ 600 ರೂಪಾಯಿಗಳಿಗೆ ಏಕಾಏಕಿ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಬಂದಿದ್ದಲ್ಲಿ, ಇದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಭೂಮಾಪನ ಇಲಾಖೆಯಲ್ಲಿ ನೀಡಲಾಗುವ ಎಲ್ಲಾ ರೀತಿಯ ನಕ್ಷೆಗಳಿಗೆ ಏಕರೂಪದ ದರ ವಿಧಿಸಿ ಬಡ ರೈತರಿಗೆ ಉಂಟಾಗಿರುವ ಆರ್ಥಿಕ ಹೊರೆಯನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ಇಲ್ಲಾ. ಸಾರ್ವಜನಿಕರಿಂದ ಎಫ್.ಎಂ.ಬಿ. ಎಂದು ಕರೆಯಲ್ಪಡುವ ದಾಖಲೆಯು ಬಳ್ಳಾರಿ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ. ಹಾಗೂ ಚಾಮರಾಜನಗರ ಜಿಲ್ಲೆಯ